(iii) *re* : Satyagraha by gangmen of P.W.D. Divisions at Gulbarga etc.

ಶ್ರೀ ಬಿ. ವಿ. ಕಕ್ಕಿಲಾಯ.—ನೆನ್ನೆ ದಿವಸ ರೂಲ್ ೫೧೨ರ ಪ್ರಕಾರ ನಾನು ಒಂದು ನೋಟೀಸನ್ನು ಕಳುಹಿಸಿದ್ದೆ. ಪಿಡಬ್ಲ್ಯೂಡಿ ಗ್ಯಾಂಗ್‌ಮನ್ ಬಗ್ಗೆ...

ಅಧ್ಯಕ್ಷರು.—ಮಾನ್ಯ ಮಂತ್ರಿಗಳು ನನಗೆ ಒಂದು ಕಾಗದ ಬರೆದಿದ್ದಾರೆ. ಅದರಲ್ಲಿ ಅವರು ನಾನು ಎಲ್ಲಾ ಮಾಹಿತಿಗಳನ್ನು ಸಂಗ್ರಹ ಮಾಡಿಕೊಂಡು ಉತ್ತರಕೊಡುತ್ತೇನೆಂದು ಹೇಳಿದ್ದಾರೆ ಆದರೆ ಅವರಿಗೆ ಅಸೆಂಬ್ಲಿ ಬೆಳಿಗ್ಗೆ ಸೇರುವುದು ಗೊತ್ತಿರಲಿಲ್ಲ. ಆದ್ದರಿಂದ ಅವರು ಎಲ್ಲಾ ಮಾಹಿತಿಗಳನ್ನು ಸಂಗ್ರಹ ಮಾಡಿಕೊಂಡು ಮಧ್ಯಾಹ್ನ ಸಭೆ ಏಳುವುದಕ್ಕೆ ಮುಂಚೆ ಸ್ಟೇಟ್‌ಮೆಂಟ್ ಮಾಡುತ್ತೇನೆಂದು ತಿಳಿಸಿದ್ದಾರೆ.

ಶ್ರೀ ಎಂ. ಎಸ್, ಕೃಷ್ಣನ್.—ಈ ಗ್ಯಾಂಗ್‌ಮ್ಯಾನ್‌ಗಳು ಬೀದರ್, ಗುಲ್ಬರ್ಗ ಮತ್ತು ಸೌತ್ ಕನರಾ ಜಿಲ್ಲೆಗಳಿಂದ ಬಂದು ಧರಣಿ ಸತ್ಯಾಗ್ರಹ ಮಾಡುತ್ತಿದ್ದಾರೆ.

ಶ್ರೀ ಎಚ್. ಎಂ. ಚನ್ನಬಸಪ್ಪ.—ಅದು ನಮ್ಮ ಗಮನಕ್ಕೆ ಬಂದಿಲ್ಲ.

ಶ್ರೀ ಎಂ. ಎಸ್. ಕೃಷ್ಣನ್.—ತಮ್ಮ ಗಮನಕ್ಕೆ ಯಾವುದೂ ಬರುವುದಿಲ್ಲ. ದಯವಿಟ್ಟು ಇದಕ್ಕೆ ಸಂಬಂಧಪಟ್ಟವರನ್ನು ಕರೆಸಿ ಮಾತನಾಡಬೇಕೆಂದು ನಾನು ಮಾನ್ಯ ಮಂತ್ರಿಗಳನ್ನು ಕೇಳಿಕೊಳ್ಳುತ್ತೇನೆ.

10-00 A. M.

ಶ್ರೀ ಎಚ್. ಎಂ. ಚನ್ನಬಸಪ್ಪ.—ಈ ವಿಷಯದಲ್ಲಿ ಯಾರಿಗೆ ನೋವು ಆಗಿದೆ ಏನು ಪರಿಹಾರ ಬೇಕು, ಇಂಥ ಕಪ್ಪಗಳು ನಮಗೆ ಇವೆ, ಎನ್ನುವುದನ್ನು ಕೇಳುವುದಕ್ಕೆ ನಾವು ತಯಾರಾಗಿದ್ದೇವೆ ಇದರಲ್ಲಿ ಅಡ್ಡಿ ಏನೂ ಇಲ್ಲ. ನಿನ್ನೆಯದಿವಸ ಲೋಕಲ್ ಕ್ಯಾಂಡಿಡೇಟ್ಸ್—ನಾನ್ ಟೆಕ್ನಿಕಲ್‌ಮನ್ ಬಂದು ನಮಗೆ ಇಂಥ ತೊಂದರೆ ಇದೆ ಎಂದು ಬಂದು ನನ್ನಲ್ಲಿ ಹೇಳಿದರು. ಅದನ್ನು ವಿಚಾರಮಾಡುತ್ತೇನೆ. ಅವರ ಬಗ್ಗೆ ಸಹಾನುಭೂತಿಯ ವ್ಯವಸ್ಥೆ ಮಾಡುತ್ತೇನೆ ಎಂದು ಹೇಳಿ ಕಳುಹಿಸಿದ್ದೇನೆ. ಅಲ್ಲಿ ಧರಣಿ ಮಾಡುತ್ತಾರೆ, ಇಲ್ಲಿ ಧರಣಿ ಮಾಡುತ್ತಾರೆ ಎನ್ನುವ ಪ್ರಶ್ನೆ ಬೇರೆ. ಸಂಬಂಧಪಟ್ಟವರು ನಮಗೆ ಇಂಥ ತೊಂದರೆಯಾಗಿದೆ, ದಯವಿಟ್ಟು ಪರಿಶೀಲನೆ ಮಾಡಿ ಎಂದು ಕೇಳಿದರೆ ಅಗತ್ಯವಾಗಿ ಅದನ್ನು ವಿಚಾರ ಮಾಡಿ ಎಷ್ಟು ಸಹಾಯ ಮಾಡಬೇಕೋ ಅಷ್ಟನ್ನು ಮಾಡೋಣ. ನನಗೇ ಎಲ್ಲರನ್ನು ಕರೆಸಿ ಮಾತನಾಡಿ ಎನ್ನುವುದರಲ್ಲಿ ಯಾವ ಅರ್ಥವೂ ಇಲ್ಲ.

ಶ್ರೀ ಎಂ. ಎಸ್. ಕೃಷ್ಣನ್.—ಅವರೇ ಬರುತ್ತಾರೆ ತಾವು ದಯವಿಟ್ಟು ಮಾತನಾಡಿ.

ಶ್ರೀ ಎಚ್. ಎಂ. ಚನ್ನಬಸಪ್ಪ.—ಬಂದರೆ ನನ್ನ ಅಡ್ಡಿ ಏನೂ ಇಲ್ಲ. ಶಾಸಕರೇ ಬರಬೇಕು ಎಂದು ನಾನು ಹೇಳಲಿಲ್ಲ. ಅವರೇ ಬಂದು ಹೇಳಲಿ, ಅವನ್ನು ನಾನು ಕೇಳುತ್ತೇನೆ. ಸುಮ್ಮನೆ ವ್ಯಾಖ್ಯಾನ ಬೇಡ.

(iv) *re* : alleged police excesses against Jayapraksh Narayan at Calcutta and Allahabad

ಶ್ರೀ ಕೋಣಂದೂರು ಲಿಂಗಪ್ಪ (ತೀರ್ಥಹಳ್ಳಿ) —ಮಾನ್ಯ ಅಧ್ಯಕ್ಷರೇ, ನಾನು ನಾಲ್ಕುದಿವಸದ ಹಿಂದೆ ನನ್ನ ಸ್ನೇಹಿತರೊಂದಿಗೆ ಒಂದು ನಿರ್ಣಯವನ್ನು ಕಳುಹಿಸಿದ್ದೇನೆ. ಕಲ್ಕತ್ತದಲ್ಲಿ ಜಯಪ್ರಕಾಶ್ ನಾರಾಯಣ ಅವರಿಗೆ ನಡೆದಂಥ ಹಲ್ಲೆಯ ಬಗ್ಗೆ ನಿರ್ಣಯ ಮಾಡಬೇಕು ಎಂದು ಕೇಳಿದ್ದೇನೆ. ಹಾಗೆಯೇ ಅಲಹಾಬಾದ್‌ನಲ್ಲಿ ಸಭೆಯೊಂದರಲ್ಲಿ ಒಬ್ಬ ಹುಡುಗ ಬಂದೂಕ ಹಿಡಿದುಕೊಂಡಿದ್ದ ಎನ್ನುವ ಮಾತ್ರಕ್ಕೆ ಅನೇಕ ಕಡೆ ನಾನಾ ರೀತಿಯಾದಂಥ ಖಂಡನೆಗಳು ಆದವು. ಕಲ್ಕತ್ತದಲ್ಲಿ ನಡೆದಂಥ ಹಿಂಸಾತ್ಮಕತೆಯ ಬಗ್ಗೆಯೂ ನಾವು ಈ ಸಭೆಯವರು ಒಂದು ನಿರ್ಣಯವನ್ನು ಮಾಡಬೇಕು ಎನ್ನುವುದರ ಬಗ್ಗೆ ಕೇಳಿದ್ದೇನೆ.

ಅಧ್ಯಕ್ಷರು —ಮಾನ್ಯ ಸದಸ್ಯರು ನಿರ್ಣಯವನ್ನು ಮಂಡಿಸುವಾಗ, ಎಲ್ಲರ ಹತ್ತಿರ ಮಾತನಾಡಿದ್ದನ್ನು ನಾನೂ ನೋಡಿದೆ.

ಶ್ರೀ ಕೋಣಂದೂರು ಲಿಂಗಪ್ಪ.—ಮಾನ್ಯ ಸಂಸದೀಯ ಸಚಿವರು ಮುಖ್ಯಮಂತ್ರಿಗಳ ಹತ್ತಿರ ಇದರ ಬಗ್ಗೆ ಮಾತನಾಡುತ್ತೇನೆಂದು ಹೇಳಿದ್ದಾರೆ. ಮುಖ್ಯಮಂತ್ರಿಗಳು ಇರುವಾಗ ಇವರು ಇರುವುದಿಲ್ಲ, ಹೀಗೆ ಆಗಿದೆ. ಆದ್ದರಿಂದ ನಾವೇ ಸರ್ಕಾರಕ್ಕೆ ಒಂದು ಮಾತು ಹೇಳಿದರೆ ಉತ್ತಮ.

ಶ್ರೀ ಎ. ನಂಜಪ್ಪ.—ದೇಶದ ಮುಖಂಡರ ಮೇಲೆ ಹಲ್ಲೆ ಮಾಡಿದಾಗ ಏಟು ಬಿದ್ದಾಗ ಅವರ ಕಾರಿಗೆ ಜಖಂ ಆದಾಗ ಅದನ್ನು ನಾವು ಖಂಡಿಸದೇಹೋದರೆ, ನಮಗೆ ಮಾನುಷ್ಯತ್ವ ಇಲ್ಲ ಎಂದು ಹೇಳಬೇಕಾಗುತ್ತದೆ. ದೇಶದಲ್ಲಿ ಶಾಂತಿಯುತ ಮಾರ್ಗಕ್ಕೆ ಬೆಲೆಯಿಲ್ಲ ಎನ್ನುವ ಭಾವನೆ ಬರುತ್ತದೆ. ಮುಖ್ಯಮಂತ್ರಿಗಳು ಇಲ್ಲಿ ಇಲ್ಲದೇಹೋದರೂ ಪರವಾಗಿಲ್ಲ, ಈ ಮಾಹಾಸಭೆಯಲ್ಲಿ ಇದರ ಬಗ್ಗೆ ನಾವು ಖಂಡನೆ ಮಾಡದೇ ಹೋದರೆ ನಾವು ಕರ್ತವ್ಯಲೋಪ ಮಾಡಿದಂತಾಗುತ್ತದೆ ಆದ್ದರಿಂದ ನಾವು ನಿರ್ಣಯವನ್ನು ತೆಗೆದು ಕೊಳ್ಳಬೇಕು.

ಶ್ರೀ ಎಸ್. ಬಂಗಾರಪ್ಪ.—ಸರ್ಕಾರದವರು ಇದಕ್ಕೆ ಒಪ್ಪಿಗೆಯನ್ನು ಕೊಡುವುದು ಒಳ್ಳೆಯದು.

ಶ್ರೀ ಎಚ್. ಡಿ. ದೇವೇಗೌಡ.—ಶ್ರೀಮಾನ್ ಕೃಷ್ಣ ಅವರ ಕನ್‌ಸೆಂಟ್ ಪಡೆದು ನಿರ್ಣಯವನ್ನು ಕಳುಹಿಸಿಕೊಟ್ಟಿರುವುದು.

ಶ್ರೀ ಕೋಣಂದೂರು ಲಿಂಗಪ್ಪ.—ಅವರು ಬುದ್ಧಿಪೂರಕವಾಗಿ ತಪ್ಪಿಸಿಕೊಳ್ಳುತ್ತಿದ್ದಾರೆ ಎಂದು ನಾನು ಆರೋಪಿಸುತ್ತೇನೆ. ನಾಲ್ಕು ದಿವಸದಿಂದ ನಾನು ಸತತವಾಗಿ ಇದರ ಬಗ್ಗೆ ಕೇಳುತ್ತಿದ್ದೇನೆ. ಮಾನ್ಯಸಂಸದೀಯ ಸಚಿವರು ಮುಖ್ಯಮಂತ್ರಿಗಳು ಬರಲಿ ಎಂದು ಹೇಳುತ್ತಾರೆ.

ಅಧ್ಯಕ್ಷರು.—ಮಾನ್ಯ ಲಿಂಗಪ್ಪನವರು ಸಂಸದೀಯ ಸಚಿವರನ್ನು ಕೇಳಿರುವುದು ನನಗೆ ಗೊತ್ತಿಲ್ಲ. ವಿಚಾರಿಸುತ್ತೇನೆ. ಆಮೇಲೆ ತಮ್ಮನ್ನು ಮಂತ್ರಿ ಮಂತ್ರಿಗಳನ್ನು ಕರೆಯಿಸುತ್ತೇನೆ.

(v) *re* : Replies due to Questions, notices etc., from Government

ಶ್ರೀ ಕೆ. ಯಂಕಟಪ್ಪ.—ಸೋಮವಾರದ ದಿವಸ ನಾನು ರೂಲ್ ೩೧೨ರ ಪ್ರಕಾರ ನೋಟೀಸ್ ಕಳುಹಿಸಿದ್ದೇನೆ. ಕೆಲವು ಪ್ರಶ್ನೆಗಳನ್ನು ಕೂಡ ಕೊಟ್ಟಿದ್ದೇನೆ. ಎರಡು ತಿಂಗಳ ಮುಂದೆ ಕೊಟ್ಟಿದ್ದರೂ ಸಹ ಅವಕ್ಕೆ ಉತ್ತರ ಬರಲಿಲ್ಲ.

ಅಧ್ಯಕ್ಷರು.—ಫೈಲ್ ತರಿಸಿ ನೋಡುತ್ತೇನೆ.

ಶ್ರೀ ಕೋಣಂದೂರು ಲಿಂಗಪ್ಪ.—ಬೆಂಗಳೂರಿನಲ್ಲಿ ಪೆಡ್ಡೊಲ್ ಕ್ಯಾಸ್ಟ್ ಹಾಸ್ಪಲ್ ಕಟ್ಟಡದ ವ್ಯವಹಾರಗಳ ಬಗ್ಗೆ ವಿಜಿಲೆನ್ಸ್ ಕಮಿಷನ್ ರಿಪೋರ್ಟ್ ಅನ್ನು ಸಭೆಯಲ್ಲಿ ಮಂಡಿಸುತ್ತೇವೆಂದು ಮಂತ್ರಿಗಳು ಹೇಳಿದ್ದರು.

ಅಧ್ಯಕ್ಷರು.—ಇದರ ಬಗ್ಗೆ ನಿನ್ನೆ ಕೂಡ ಹೇಳಿದ್ದೀರಿ, ನಾನು ಪ್ರೊಸಿಡಿಂಗ್ಸ್ ತರಿಸಿ ನೋಡಿ ತಮಗೆ ಹೇಳುತ್ತೇನೆ.

Notice of a Question of Privilege :

re : incorrect Statement by the Minister for Public Works about M/s Nirmala Engineering Co, Affairs

ಶ್ರೀ ಎಚ್. ಡಿ. ದೇವೇಗೌಡ (ಹೊಳೆನರಸಿಪುರ) —ಮಾನ್ಯ ಚನ್ನಬಸಪ್ಪನವರಿಗೆ ಸಂಬಂಧಪಟ್ಟ ಹಾಗೆ ಇನ್ನೊಂದು ಹಳೆಯ ವಿಷಯವನ್ನು ಹೇಳಬೇಕಾಗಿದೆ. ನಾವು ಕಾವು ಇದ್ದಾಗ ಏಟು ಹೊಡೆಯಬೇಕು. ನಿರ್ಮಲ ಇಂಜಿನಿಯರಿಂಗ್ ಕಂಪನಿಯ ಬಗ್ಗೆ ಕಾವು ಏರಿ ಹೋಗಿದೆ. ನಿರ್ಮಲ ಇಂಜನಿಯರಿಂಗ್ ಕಂಪನಿಯ ಪ್ರಕರಣದಲ್ಲಿ ಶ್ರೀಮಾನ್ ಚನ್ನಬಸಪ್ಪನವರು ನನ್ನ ಪ್ರಶ್ನೆಗೆ ಉತ್ತರ ಕೊಡತಕ್ಕ ಕಾಲದಲ್ಲಿ ಅಡಿಷನಲ್ ಸೆಕ್ರೆಟರಿಯವರು ಸರ್ಕಾರದ ನಿರ್ಣಯವನ್ನು ಕಾರ್ಯರೂಪಕ್ಕೆ ತರತಕ್ಕ ಕಾಲದಲ್ಲಿ ಒಂದು ಭಾಗಾಂಶವನ್ನು ಬಿಟ್ಟು ಹುಕುಂ ಅನ್ನು ಜಾರಿಗೆ ತಂದಿದ್ದಾರೆ, ಅವರನ್ನು ಪ್ರಾಸಿಕ್ಯೂಷನ್ ಮಾಡತಕ್ಕ ಒಂದು ಅಪರೇಟೀವ್ ಪೋರ್ಷನ್ ಅನ್ನು ಕೈಬಿಟ್ಟಿದ್ದಾರೆ ಎಂದು ಸಭೆಯಲ್ಲಿ ಹೇಳಿದರು. ಇದಕ್ಕೆ ತದ್ವಿರುದ್ಧವಾಗಿ ಮುಖ್ಯಮಂತ್ರಿಗಳು, ತಮ್ಮ ಹೇಳಿಕೆಯನ್ನು ಕೊಡತಕ್ಕ ಕಾಲದಲ್ಲಿ ಶ್ರೀಮಾನ್ ಚನ್ನಬಸಪ್ಪನವರಿಗೆ ಎಲ್ಲಾ ಅಂಶ ಗೊತ್ತಿವೆ, ನಿನ್ನೆಯ ದಿವಸ ಸಾಯಂಕಾಲ ಇದರ ಬಗ್ಗೆ ತಿಳಿದುಕೊಂಡಿದೇನೆಂದು